# ವಚನಕಾರ್ತಿಯರ ವಚನಗಳಲ್ಲಿ ಗುರು, ಲಿಂಗ, ಜಂಗಮದ ಕಲ್ಪನೆ

ಮಹಾಲಿಂಗಪ್ರಭು

ಸಹಾಯಕ ಅಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಉದಯಪುರ, ಬೆಂಗಳೂರು.

DOI: https://doi.org/10.5281/zenodo.15795731

## ABSTRACT:

ಕನ್ನಡ ಸಾಹಿತ್ಯವು ಅಪಾರ ಸಂಪತ್ತನ್ನು ಒಳಗೊಂಡ ಶ್ರೇಷ್ಠ ಪರಂಪರೆಯನ್ನು ಹೊಂದಿದೆ. 12ನೇ ಶತಮಾನವು ಎಲ್ಲಾ ಶಿವಶರಣರು ನಿರ್ಭಯವಾಗಿ ತಮ್ಮ ಆಲೋಚನೆಗಳನ್ನು, ಭಾವನೆಗಳನ್ನು ವಚನಗಳ ಮೂಲಕ ಹಂಚಿಕೊಳ್ಳಲು ಅವಕಾಶ ದೊರೆತ ಕಾಲ. ರಾಜರ ಆಶ್ರಯವಿಲ್ಲದೆ, ತಮ್ಮನ್ನು ತಾವು ತೊಡಗಿಸಿಕೊಂಡು, ಯಾರ ಆಶ್ರಯವೂ ಇಲ್ಲದೆ, ಜಾತಿ, ಧರ್ಮ, ಸ್ತ್ರೀ–ಪುರುಷ ಎಂಬ ಎಲ್ಲಾ ಭೇದಗಳನ್ನು ಮರೆತು ಆತ್ಮವಿಶ್ವಾಸದ ಮೂಲಕ ಪರಿವರ್ತನೆಗೆ ನಾಂದಿ ಹಾಡಿದ ಕಾಲವದು. ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ಪೂಜ್ಯ ಭಾವನೆಯಿದೆ. ಹೆಣ್ಣನ್ನು ದೇವತೆಗೆ ಹೋಲಿಸುತ್ತಾರೆ, ಆದರೂ ಕೂಡ ಹೆಣ್ಣಿಗೆ ಯಾವುದೇ ಸ್ವಾತಂತ್ರ್ಯವಿಲ್ಲ, ಗಂಡಿನ ಗುಲಾಮಳಾಗಿ ಇರಬೇಕು ಎಂಬುದನ್ನು ದಿಕ್ಕರಿಸಿ ಹೆಣ್ಣಿಗೆ ಸ್ವಾತಂತ್ರ್ಯವನ್ನು ವಚನ ಚಳುವಳಿಯಲ್ಲಿ ನೀಡಲಾಯಿತು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪುರುಷನಷ್ಟೇ ಸ್ತ್ರೀಯು ಕೂಡ ಸಮಾನಳು ಎಂಬುದನ್ನು ವಚನಗಳ ಮೂಲಕ ಸಾರಿ ಹೇಳಿದರು.

‘‘ಸತಿಪತಿಗಳೊಂದಾದ ಭಕ್ತಿ, ಹಿತದಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ’’ ಎಂದು ಜೇಡರ ದಾಸಿಮಯ್ಯನು ಕೂಡ ಹೆಣ್ಣಿನ ಅವಶ್ಯಕತೆ ಮತ್ತು ಗೌರವಗಳನ್ನು ತನ್ನ ವಚನದಲ್ಲಿ ಎತ್ತಿ ಹಿಡಿದಿದ್ದಾರೆ.

ಅನುಭವಮಂಟಪದಲ್ಲಿ ಸ್ತ್ರೀ–ಪುರುಷ ಎಂಬ ತಾರತಮ್ಯವಿಲ್ಲದೆ ಎಲ್ಲರೂ ನಿರ್ಭಯವಾಗಿ ತಮ್ಮ ಎಲ್ಲಾ ವಿಚಾರಗಳನ್ನು, ಅಭಿಪ್ರಾಯಗಳನ್ನು ಮಂಡಿಸುವ ಅವಕಾಶ ದೊರೆಯಿತು. ಅಕ್ಕಮಹಾದೇವಿ ಕೂಡ ತನ್ನ ನಿಷ್ಠೆಯನ್ನು ಅನುಭವಮಂಟಪದಲ್ಲಿ ನಿರೂಪಿಸಿದ್ದಾಳೆ. ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆಯನ್ನೇ ಧಿಕ್ಕರಿಸಿ ತನ್ನ ಮಲ್ಲಿಕಾರ್ಜುನನ್ನೇ ಗಂಡನೆಂದು ಭಾವಿಸಿದ ಅಕ್ಕನ ಆತ್ಮಸ್ಥೈರ್ಯವು ಮೆಚ್ಚುವಂತದ್ದು.

‘‘ಲೋಕದ ಗಂಡರನೊಯ್ದು ಒಲೆಯೊಳಗಿಕ್ಕು’’ ಎಂಬ ಮಾತು, ತನ್ನ ಗಂಡ ಕೌಶಿಕನನ್ನು ಬಿಟ್ಟು ದಿಗಂಬರಳಾಗಿ ಶಿವನನ್ನು ಅರಸುತ್ತಾ ಹೊರಟಳು. ಹಾಗೆಯೇ ಆಯ್ದಕ್ಕಿ ಲಕ್ಕಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಕಾಳವ್ವೆ, ಮುಕ್ತಾಯಕ್ಕ, ಸತ್ಯಕ್ಕ, ಅಮುಗೆ ರಾಯಮ್ಮ ಮುಂತಾದ ಅನೇಕ ವಚನಕಾರ್ತಿಯರು ಸ್ವತಂತ್ರವಾಗಿ ವಚನಗಳನ್ನು ರಚಿಸಿ ಗುರು, ಲಿಂಗ, ಜಂಗಮದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು

ವ್ಯಕ್ತಪಡಿಸಿದ್ದಾರೆ. ಗುರು, ಲಿಂಗ, ಜಂಗಮದ ಕಲ್ಪನೆಯು 12ನೇ ಶತಮಾನದಲ್ಲಿ ಕಲ್ಪಿತವಾಗಿದ್ದರೂ ಕೂಡ ಪ್ರಸ್ತುತ ಸಂದರ್ಭದಲ್ಲಿ ಆಕರ್ಷಕವೂ, ಅವಶ್ಯಕತೆಯೂ ಇದೆ ಎಂಬುದನ್ನು ಕಾಣಬಹುದು.

**KEYWORDS:**

ದ್ರೋಹಿ, ಅಘೋರ ನರಕಿ, ಲಿಂಗ, ಜಂಗಮ, ತ್ರಿವಿಧ ದಾಸೋಹ, ಅಡಗು, ಸುರೆ, ಶರಣಸತಿ, ಲಿಂಗಪತಿ.

### ಅಕ್ಕನ ವಚನಗಳಲ್ಲಿ ಗುರು, ಲಿಂಗ, ಜಂಗಮದ ಕಲ್ಪನೆ:

ಅಕ್ಕಮಹಾದೇವಿಯು ಉಡುತಡಿಯಲ್ಲಿ ನಿರ್ಮಲಶೆಟ್ಟಿ ಮತ್ತು ಸುಮತಿ ಎಂಬ ದಂಪತಿಗಳ ಬಡ ಕುಟುಂಬದಲ್ಲಿ ಜನಿಸಿದಳು. ನಂತರ ಕೌಶಿಕನೊಂದಿಗೆ ವಿವಾಹವಾದರೂ ಕೂಡ ಕೆಲವು ಶರತ್ತುಗಳನ್ನು ಕೌಶಿಕ ಮೀರಿದ್ದರಿಂದ ಅವನನ್ನು ತೊರೆದು ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಎಂದು ಭಾವಿಸಿ ಗಂಡನನ್ನು ದಿಕ್ಕರಿಸಿ ನಡೆದಳು. "ನನ್ನ ಗುರುವೂ ಚೆನ್ನನೇ, ನನ್ನ ಗಂಡನೂ ಚೆನ್ನನೇ" ಎಂದು ಭಾವಿಸಿ ಹೊರನಡೆಯುತ್ತಾಳೆ. ಆಚಾರ, ವಿಚಾರ, ಅರಿವು, ಪ್ರಾಣ ಎಲ್ಲವನ್ನೂ ಸಹ ಚೆನ್ನನಲ್ಲಿ ಕಾಣುತ್ತಾ ಹೊರಡುತ್ತಾಳೆ.

**"ಗುರುವಿನ ಕಾರಣದಿಂದ ಪಾದೋದಕ ಪ್ರಸಾದವ ಕಂಡೆ**<br>
**ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ**<br>
**ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ**<br>
**ಚೆನ್ನಮಲ್ಲಿಕಾರ್ಜುನಯ್ಯ, ನಾ ಹುಟ್ಟಿಲೊಡನೆ**<br>
**ವಿಭೂತಿಯ ಪಟ್ಟವ ಕಟ್ಟಿ, ಸದ್ಗುರು ಸ್ವಾಮಿ**<br>
**ಲಿಂಗ ಸ್ವಾಯತವ ಮಾಡಿದವನಾಗಿ, ಧನ್ಯಳಾದೆನು"**

**ಅ.ವ!ಪು.ಸಂ–71 ಪ್ರ.ಸಂ 39/1**

ಅಕ್ಕಮಹಾದೇವಿಯು ಈ ವಚನದಲ್ಲಿ ಚೆನ್ನಮಲ್ಲಿಕಾರ್ಜುನನ್ನೇ ಗುರುವಾಗಿ ಸ್ವೀಕರಿಸಿದ್ದಾಳೆ. ತಾನು ಮಾಡಿರುವ ಎಲ್ಲಾ ಕಾಯಕದಲ್ಲೂ ಗುರುವಿನ ಕರುಣೆ ಇರುವುದನ್ನು ಗಮನಿಸಬಹುದು. "ಗುರುವಿನ ಕರುಣೆಯಿಂದಲೇ ಲಿಂಗ–ಜಂಗಮರನ್ನು ಕಂಡೆ" ಎನ್ನುತ್ತಾಳೆ. ಪ್ರಸಾದವನ್ನು ಕಂಡೆ ಹಾಗೂ ಸದ್ಭಕ್ತರನ್ನು ಕಂಡೆ ಎನ್ನುವಲ್ಲಿ ಗುರುವಿನ ಮಹತ್ವ ಹಾಗೂ "ಚೆನ್ನಮಲ್ಲಿಕಾರ್ಜುನನೇ ನನ್ನ ಗುರು" ಎಂದು ಹೇಳುವುದರ ಜೊತೆಗೆ ತನ್ನನ್ನೇ ತಾನು ಸಮರ್ಪಿಸಿಕೊಂಡಿರುವುದನ್ನು ಗಮನಿಸಬಹುದು. ಹಾಗೆಯೇ ಮುಂದುವರಿದು ತನು, ಮನ, ಭಾವವೆಂಬ ತ್ರಿವಿಧದ ಬಗ್ಗೆ ಅಕ್ಕಮಹಾದೇವಿ ತನ್ನದೇ ವಚನದಲ್ಲಿ ಹೇಳಿಕೊಟ್ಟಿದ್ದಾಳೆ.

**"ಲಿಂಗ ಲಿಂಗವ ವೇಧಿಸಿ**<br>
**ಲಿಂಗ ಲಿಂಗದೊಳಗಾಯಿತ್ತು**

**ಮನ ಲಿಂಗವ ವೇಧಿಸಿ**
**ಮನ ಲಿಂಗದೊಳಗಾಯಿತ್ತು**
**ಭಾವ ಲಿಂಗವ ವೇಧಿಸಿ**
**ಭಾವ ಲಿಂಗದೊಳಗಾಯಿತ್ತು"**

**ಅ.ವ. ಪು.ಸಂ. 76.ಪ.ಸಂ 51/1**

ಎಂದು ಹೇಳುವಲ್ಲಿ ತನು, ಮನ, ಭಾವಗಳು ಹೇಗೆ ಲಿಂಗ ಸಂಗವಾಗುತ್ತವೆ ಹಾಗೂ ಈ ತ್ರಿವಿಧವು ಲಿಂಗಕ್ಕೆ ಅರ್ಪಿಸಿಕೊಳ್ಳುವ ಬಗೆಯನ್ನು, ಲಿಂಗದ ಆರೈಕೆಯನ್ನು ಈ ಭಾಗದಲ್ಲಿ ಅಕ್ಕಮಹಾದೇವಿ ತಿಳಿಸಿದ್ದಾರೆ.

ಶರಣನಾದವನು ಸುಳ್ಳುಗಳನ್ನು ಹೇಳಬಾರದು ಎಂಬುದನ್ನು ಗುರು, ಲಿಂಗ, ಜಂಗಮದ ಕಲ್ಪನೆಯನ್ನು ಇಟ್ಟುಕೊಂಡು ಈ ವಚನದಲ್ಲಿ ಹೀಗೆ ಹೇಳಿದ್ದಾರೆ.

**"ಸಟೆ-ದಿಟವೆಂಬುವೆರಡು ಹಿಡಿದು**
**ನಡೆವುದೀ ಲೋಕವೆಲ್ಲವೂ**
**ಸಟೆ-ದಿಟವೆಂಬುವೆರಡು ಹಿಡಿದು**
**ನಡೆವನೇ ಲೋಕದೊಡನೆ ಶರಣನು?**
**ಗುರು, ಲಿಂಗ, ಜಂಗಮದಲ್ಲಿ ಸಟೆಯ ಬಳಸಿದಡೆ ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ**
**ಉಂಬುದೆಲ್ಲ ಕಿಲಬಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ, ಹಸಿಯೆಂಬುದೆ ಹೊಲೆ"**

**ಅ ವ ಪು.ಸಂ 109 ಪ.ಸಂಖ್ಯೆ : 140/1**

ನಿಜವಾದ ಶಿವಶರಣನಾದವನು ಸುಳ್ಳುಗಳನ್ನು ಎಂದಿಗೂ ಹೇಳಬಾರದು. ಆತ ಗುರುವಾದರೂ ಸರಿ, ಲಿಂಗವಾದರೂ ಸರಿ, ಜಂಗಮನಾದರೂ ಸರಿ, ಸುಳ್ಳು ಹೇಳುವವನು ನಿಜವಾದ ಶರಣನಾಗಲು ಸಾಧ್ಯವಿಲ್ಲ. ಅಂತಹ ಶರಣನು ನಿಜವಾದ ದ್ರೋಹಿಯಾಗುತ್ತಾನೆ. ತಿನ್ನುವ ಆಹಾರ, ನೀರು ಎಲ್ಲವೂ ಹೊಲಸಾಗಿರುತ್ತದೆ ಎಂಬುದನ್ನ ಅಕ್ಕಮಹಾದೇವಿ ಗುರು, ಲಿಂಗ, ಜಂಗಮದ ಕಲ್ಪನೆಯ ಮೂಲಕ ಶರಣರ ಪ್ರಾಮಾಣಿಕತೆಯನ್ನು ತೋರಿಸಿದ್ದಾರೆ.

**"ಎನ್ನಾಂಗದಲ್ಲಿ ಆಚಾರದ ತೋರಿದನಯ್ಯ ಬಸವಣ್ಣನು**
**ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು**
**ತನ್ನ ಪ್ರಾಣದಲ್ಲಿ ಅರುಹ ತೋರಿದನಯ್ಯ ಬಸವಣ್ಣನು**
**ಚೆನ್ನಮಲ್ಲಿಕಾರ್ಜುನ ಎನ್ನ ಹೆತ್ತ ತಂದೆ ಸಂಗನಬಸವಣ್ಣನು**
**ಎನಗೇ ಕ್ರಮವನರುಹಿದನಯ್ಯ!"**

**ಅ ವ/ ಪು ಸಂ 114. ಪ. ಸಂ 151/1**

ಹೀಗೆ ಅಕ್ಕಮಹಾದೇವಿಯು ಬಸವಣ್ಣನವರ ಮೇಲೆ ಇಟ್ಟಿದ್ದ ಅಪಾರ ಗೌರವವನ್ನು ಹೀಗೆ ಹೇಳಿದ್ದಾಳೆ. "ಆಚಾರವೇ ಲಿಂಗ" ಎಂಬುದನ್ನು ಬಸವಣ್ಣ ತಿಳಿಸಿದ್ದಾರೆ. ಹಾಗೆಯೇ "ಚೆನ್ನಮಲ್ಲಿಕಾರ್ಜುನನೇ ನನ್ನ ಹೆತ್ತ ತಂದೆ" ಎಂದು ಹೇಳುತ್ತಾ ಭಕ್ತಿಯನ್ನು ಹಾಗೂ ಆಚಾರ, ಲಿಂಗ, ಪ್ರಾಣ, ಜಂಗಮದ ಮಹತ್ವವನ್ನು ತಿಳಿಸಿದ್ದಾರೆ.

ಅಲ್ಲದೆ ಗುರು, ಲಿಂಗ, ಜಂಗಮದ ಮಹತ್ವ ಪ್ರಸ್ತುತ ಸಂದರ್ಭದಲ್ಲಿ ಎಷ್ಟು ಮುಖ್ಯ ಎಂಬ ಸಂದೇಶವನ್ನು ಸಾರಿ ಹೇಳಿದ್ದಾರೆ.

**ಅಕ್ಕನಾಗಮ್ಮ:**

ಅಕ್ಕನಾಗಮ್ಮ ಬಸವಣ್ಣನ ಸಹೋದರಿಯಾಗಿದ್ದು, ಅನುಭವ ಮಂಟಪದಲ್ಲಿ ಜ್ಞಾನ ಮತ್ತು ಅನುಭವ ದಾಸೋಹದಲ್ಲಿ ಭಾಗಿಯಾಗಿದ್ದಳು. "ಶರಣಸತಿ-ಲಿಂಗಪತಿ" ಮನೋಧರ್ಮವನ್ನು ತನ್ನ ವಚನಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಈಕೆಯ ವಚನಗಳ ಅಂಕಿತ ಬಸವಣ್ಣಪ್ರಿಯ ಚನ್ನಸಂಗಣ್ಣ. ಗುರು, ಲಿಂಗ, ಜಂಗಮದ ಬಗ್ಗೆ ತನ್ನ ವಚನದಲ್ಲಿ ಹೀಗೆ ಪ್ರಸ್ತಾಪಿಸಿದ್ದಾಳೆ:

**"ಗುರುಸಂಬಂಧಿ ಗುರುಭಕ್ತಯ್ಯನು**
**ಲಿಂಗಸಂಬಂಧಿ ಪ್ರಭುದೇವರು**
**ಜಂಗಮಸಂಬಂಧಿ ಸಿದ್ಧರಾಮನು"**

ಗುರು, ಲಿಂಗ, ಜಂಗಮರನ್ನು ಗುರು, ಪ್ರಭು, ಸಿದ್ಧರಾಮನ ಮೂಲಕ ನೋಡುವ ರೀತಿಯನ್ನು ಅಕ್ಕನಾಗಮ್ಮನ ವಚನಗಳಲ್ಲಿ ಕಾಣಬಹುದಾಗಿದೆ.

**ಮುಕ್ತಾಯಕ್ಕ:**

ಗುರು, ಲಿಂಗ, ಜಂಗಮದ ಕಲ್ಪನೆಯನ್ನು ಮುಕ್ತಾಯಕ್ಕ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ತನ್ನ ವಚನಗಳಲ್ಲಿ ಹೇಳಿಕೊಂಡಿದ್ದಾಳೆ.

**"ಎನ್ನ ಭಾವಕ್ಕೆ ಗುರುವಾದನಯ್ಯ ಬಸವಣ್ಣನು**
**ಎನ್ನ ಭಾವಕ್ಕೆ ಲಿಂಗವಾದನಯ್ಯ ಚೆನ್ನಬಸವಣ್ಣನು**
**ಎನ್ನ ಭಾವಕ್ಕೆ ಜಂಗಮವಾದನಯ್ಯ ಪ್ರಭುದೇವರು"**

ಮುಕ್ತಾಯಕ್ಕ ಅಜಗಣ್ಣ ತಂದೆಯ ಅಂಕಿತವನ್ನು ಇಟ್ಟುಕೊಂಡು ಗುರುವನ್ನು ಬಸವಣ್ಣನಲ್ಲೂ, ಲಿಂಗವನ್ನು ಚೆನ್ನಬಸವಣ್ಣನಲ್ಲೂ, ಜಂಗಮನನ್ನು ಪ್ರಭುದೇವರಲ್ಲೂ ಕಂಡಂತಹ ಬಗೆಯನ್ನು ಒತ್ತಿ ಹೇಳಿದ್ದಾರೆ.

ಗುರು, ಲಿಂಗ, ಜಂಗಮದ ಕಲ್ಪನೆಯು 12ನೇ ಶತಮಾನದಲ್ಲಿ ಮೂಡಿಬಂದಂತಹ ಒಂದು ಅದ್ಭುತವಾದ ಪ್ರತಿಭೆ. ಧಾರ್ಮಿಕ ವಿಧಿ ವಿಧಾನಗಳ ಹೆಚ್ಚು ಪ್ರಭಾವ ಬೀರಿದ್ದರೂ ಸಹ, ಸಾಮಾಜಿಕವಾಗಿ ಅನುಭವಮಂಟಪದಲ್ಲಿ ಸ್ತ್ರೀಯರಿಗೂ ಕೂಡ ಸ್ಥಾನಮಾನವನ್ನು ಗಳಿಸಿಕೊಟ್ಟಿದ್ದ ವಚನ ಚಳುವಳಿ ಹಾಗೂ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವ ಒಂದು ಅನುಭವ ಮಂಟಪವನ್ನು 12ನೇ ಶತಮಾನದಲ್ಲಿ ನಾವು ಗಮನಿಸಬಹುದು. ಹಾಗೆಯೇ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆಯನ್ನು ನೀಡಿದ ಮೊದಲ ಪರ್ವ ಎಂದು ಹೇಳಬಹುದು. ಅಲ್ಲಿಯವರೆಗೂ ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರಲಿಲ್ಲ. ಆದ್ದರಿಂದ ಅನುಭವ

ಮಂಟಪವೇ ಮಹಿಳೆಯರಿಗೆ ಸ್ಥಾನಮಾನವನ್ನು, ಸ್ವಾತಂತ್ರ್ಯವನ್ನು, ಸಮಾನತೆಯನ್ನು ತಂದು ಕೊಟ್ಟ ಕಾಲಘಟ್ಟ ಅದು 12ನೇ ಶತಮಾನ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**

1. ಬಸವರಾಜು ಎಲ್., (2016), ಅಕ್ಕನ ವಚನಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, (2012–2022), ಸಮಗ್ರ ವಚನ ಸಾಹಿತ್ಯ, ಕಣಜ ಕೃತಿಸ್ವಾಮ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
   https://kanaja.karnataka.gov.in/vachanasahitya/
3. ಗಿರಿಜಾಪತಿ ಎಸ್.ಎಂ., (2022) ವಚನ ರತ್ನತ್ರಿಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.